ಎಂ ವಿ ಸಿ ನಂಃ 572/2022
ಆರ್. ಡಬ್ಲ್ಯೂ-1

**(ಇಂದು ದಿನಾಂಕ 29-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಎಸ್ ಎನ್ ಬಿ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ . ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| ಕ್ರ.ಸಂ. | ದಾಖಲೆಗಳ ನಮೂನೆ | ನಿಶಾನೆ |
|---|---|---|
| 1 | ಅಧಿಕಾರ ಪತ್ರ | ನಿಡಿ-1 |
| 2 | ಪ್ರಾದೇಶಿಕ ಸಾರಿಗೆ ಅಧಿಕಾರಿ , ಶಿರಸಿಯವರು ನೀಡಿದ ದಿಃ 27.01.2026 ರ ಚಾಲನಾ ಪತ್ರದ ಉತಾರ | ನಿಡಿ-2 |

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ ಎಚ್ ಸಿ ಎಚ್ ವಕೀಲರಿಂದ**

ಅಪಘಾತದಲ್ಲಿ ಭಾಗಿಯಾದ ವಾಹನದ ಕುರಿತು ನನಗೆ ಮಾಹಿತಿ ಇಲ್ಲ . ನಿಡಿ-2 2016 ರಲ್ಲಿ ನವೀಕರಣಗೊಂಡಿದ್ದು ಅದರ ಮೊದಲು 1995 ರಲ್ಲಿ ನಾಗರಾಜ ಭರಮಶೆಟ್ಟರ ಇವರಿಗೆ ಚಾಲನಾ ಪರವಾನಿಗೆ ಪತ್ರ ನೀಡಲಾಗಿತ್ತು . 1995 ರಿಂದ ನಿಡಿ-2 ನ್ನು ಕೊಟ್ಟ ದಿನಾಂಕದವರೆಗೆ ಚಾಲನಾ ಪರವಾನಿಗೆಯ ಅವಧಿಯನ್ನು ಪರಿಗಣಿಸಿದ್ದಲ್ಲಿ ಸದರಿ ನಾಗರಾಜ ಭರಮಶೆಟ್ಟರ ಇವರಿಗೆ ವಾಹನ ಚಲಾಯಿಸಲು ಸಂಪೂರ್ಣವಾಗಿ ಜ್ಞಾನ ಮತ್ತು ಸಾಮರ್ಥ್ಯ ಇರುತ್ತದೆ ಎಂದರೆ ಸರಿ . 2022 ನೇ ಇಸ್ವಿಯಲ್ಲಿ ನಾಗರಾಜ ಭರಮಶೆಟ್ಟರ ಇವರಿಗೆ ವಾಹನ ಚಾಲನೆ ಮಾಡಲು ಸಾಮರ್ಥ್ಯ ಇರಲಿಲ್ಲ ಎನ್ನುವುದನ್ನು ನ್ಯಾಯಾಲಯದಿಂದ ಬಂದ ಸಮನ್ಸ ನೋಡಿ ಹೇಳುತ್ತಿದ್ದೇನೆ . ನ್ಯಾಯಾಲಯದಿಂದ ಬಂದ ಸಮನ್ಸನಲ್ಲಿ ಈಗ ನಾನು ಹೇಳಿದ ವಿಷಯಗಳ ಕುರಿತು ಉಲ್ಲೇಖ ಇರುವುದಿಲ್ಲ ಆದರೆ 2 ನೇ ಎದುರುದಾರನ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀಸವಾಲುಃ 1 ನೇ ಎದುರುದಾರರ ಪರ ಶ್ರೀ ಬಿ ಕೆ ಎಸ್ ವಕೀಲರಿಂದ**

1 ನೇ ಎದುರುದಾರರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು . ಗೈರು ಹಾಜರು ಇದ್ದಾರೆ , ಕೊರಿಕೆ ಇಲ್ಲ , ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.